


ಬಾಗಲಕೋಟೆಗೆ ಸ್ವಾಗತ ಕೋರುವ ಶಿರೂರ ಅಗಸಿ

# ಮುಳುಗಡಿ ಊರಂದ್ರ...

**ಕರ್ನಾಟಕದ ನಕಾಶದೊಳಗ ಬಾಗಲಕೋಟ ಜಿಲ್ಲಾದ್ದ ವೈಶಿಷ್ಟಾನ ಬ್ಯಾರೆ. ಹಿಂದಿನ ಬ್ಹಾಳಷ್ಟ ಶತಮಾನಗಳಿಂದನೂ ಬಾಗಲಕೋಟ ಪ್ರದೇಶ ಬ್ಯಾರೆ ಬ್ಯಾರೆ ರಾಜರ ಅರಸೊತ್ತಿಗ್ಯಾಗ ಇತ್ತ. ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಯರು, ವಿಜಯನಗರ ದೊರೆಗಳು, ಆದಿಲ್ ಶಾಹಿ, ಮರಾಠಾ, ಇಂಗ್ಲೀಷರು ಆಳ್ಯಾರ. ಹಿಂಗಾಗಿ ಇಲ್ಲಿನ ಭಾಷಾ ಮ್ಯಾಲೆ ಇವರೆಲ್ಲರ ಪ್ರಭಾವ ಐತಿ.**

**■ ಮಲ್ಲಿಕಾರ್ಜುನ ಶೆಲ್ಲಿಕೇರಿ**

ಹಿಂದಿನ ಬ್ಹಾಳಷ್ಟ ಶತಮಾನಗಳಿಂದನೂ ಬಾಗಲಕೋಟ ಪ್ರದೇಶ ಬ್ಯಾರೆ ಬ್ಯಾರೆ ರಾಜರ ಅರಸೊತ್ತಿಗ್ಯಾಗ ಇತ್ತ. ದಕ್ಷಿಣ ಭಾರತದ ದೊಡ್ಡ ಸಾಮ್ರಾಜ್ಯ ಅಂತ ಹೆಸರ ಪಡೆದಿದ್ದ ಚಾಲುಕ್ಯರಿಂದ ಹಿಡಿದ ಮುಂದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಯರು, ವಿಜಯನಗರ ದೊರೆಗಳು ಆಳ್ಯಾರ. ಮುಂದ ಆದಿಲ್ ಶಾಹಿ, ಮರಾಠಾ, ಸಣ್ಣ ಸಣ್ಣ ಸಂಸ್ಥಾನಗಳು ಕಡಿಕ ಇಂಗ್ಲೀಷರ ಆಳ್ವಿಕೆಗೆ ಒಳಗಾಗಿದ್ದ ಪ್ರದೇಶ ಇದು. ಹಿಂಗಾಗಿ ಇಲ್ಲಿ ಜನರ ಸಂಸ್ಕೃತಿ, ಭಾಷಾ ಮ್ಯಾಲೆ ಇವರದೆಲ್ಲ ಪ್ರಭಾವ ಐತಿ.

ಅದರಾಗಂತೂ ಇಲ್ಲಿ ಜನ ಮಾತಾಡೂ ಭಾಷಾದಾಗ ಹಿಂದಿ, ಮರಾಠಿ, ಉರ್ದು ಭಾಷೆಗಳ ಪ್ರಭಾವ ಬ್ಹಾಳ ಐತಿ. ಅದಕ ಇಲ್ಲಿ ಜನ್ರು ಮಾತಾಡು ಮುಂದ ಎಷ್ಟೋ ಪದಗೊಳು ಬ್ಯಾರೆ ಊರಿನ ಜನ್ರಿಗೆ ಗೊತ್ತ ಆಗೂದಿಲ್ಲ. ಕಲಿತವ್ರು, ಕಲಿದವ್ರೂ ಆಡೂ ಮಾತಿನ್ಯಾಗ ಅಂತಾ ಶಬ್ದಗೊಳು ಹಾಸು ಹೊಕ್ಕ ಆಗ್ಯಾವ. ಅದರಾಗೂ ಸಂಖ್ಯಾವಾಚಕ ಪದಗೊಳ ಹೆಚ್ಚ. ಯಾವದ ಒಬ್ಬ ರೈತಗ ಹೊಲ ಎಷ್ಟ ಐತಿ ಅಂತ ಕೇಳದ್ರ ದೀಡೆಕರೆ ಅಂತಾರ ಹೊರತು ಒಂದೂವರೆ ಎಕರೆ ಅನ್ನೂದು ಕಮ್ಮಿ. ಹಂಗ ಸಮಯ ಕೇಳಿದ್ರ ಸಾಡೇ ಅಕ್ರಾ, ಸವ್ವಾ ಬಾರ ಅಂತಾರ ಪರಂತು ಹನ್ನೊಂದೂವರೆ, ಹನ್ನೆರಡು ಕಾಲು ಅನ್ನೂದಿಲ್ಲ. ಇನ್ನ ರಾಶಿ ಆದಾಗ ಉಳ್ಳಾಗಡ್ಡಿ ಆಗ್ಲಿ, ಶೇಂಗಾ ಆಗ್ಲಿ ಕಡಿಕ ಕಬ್ಬು ಆದ್ರೂ ಎಷ್ಟ ಆಗೇತಿ ಅಂದ್ರ ದೋನಸೇ ಪಿಸಬಿ, ಪನ್ನಾಸ ಕ್ವಿಂಟಲ್, ತೀನಸೇ ಟನ್ ಅಂತಾರ. ಅದರ ಬದಲಾಗಿ ಇನ್ನೂರು ಚೀಲ, ಐವತ್ತು ಕ್ವಿಂಟಲ್, ಮುನ್ನೂರು ಟನ್ ಅನ್ನೂದಿಲ್ಲ. ಅಷ್ಟರ ಮಟ್ಟಿಗೆ ಆ ಭಾಷಾ ಆಡೂ ಮಾತಿನ ಮ್ಯಾಲ ಪರಿಣಾಮ ಬೀರ್ಯಾವು. ಮರಾಠರ ಆಡಳಿತದ ಪರಿಣಾಮದಿಂದ ಆ ಭಾಷೆಯ ಬಹಳ ಪದಗೋಳು ಇಲ್ಲಿ ಆಡೂವಂತ ಸಂದರ್ಭದಾಗ ಬಳಕಿ ಆಗ್ತಾವ. ಹಿಂಗಾಗಿ ಕನ್ನಡ ಪದ ಯಾವುದು, ಬ್ಯಾರೆ ಭಾಷಾ ಪದ ಯಾವುದು ಅಂತ ಕೂನ ಹಿಡಿಯೋದು ಬ್ಹಾಳ ಕಷ್ಟ.

ನಾವ ಸಣ್ಣವರಿದ್ದಾಗ ಹಿರಿಯಾರು ಹೇಳತಿದ್ದ ಅನೇಕ ಶಬ್ದಗೊಳು ನಮಗ ಅರ್ಥ ಆಕ್ಕಿರಲಿಲ್ಲ. ಆವಾಗ ಅವ್ರ ಆ ಪದಕ್ ಅರ್ಥ ಹೇಳ್ತಿದ್ರ. ಹಂಗ ಕನ್ನಡ ಸಾಲಿಗಿ ಹೋಗೋ ಮುಂದ ಊರ ಪಂಚಾಯತಿ ಕಟ್ಟೆ ಮ್ಯಾಲ ಕುಂತ ಎಷ್ಟೋ ಹಿರಿಯಾರು ನಾವು ಬಗಲಿಗೆ ಪಾಟಿಚೀಲ ಹಾಕೊಂಡು ಹೋಗೋ ಮುಂದ ನಮ್ಮ ಶ್ಯಾಣ್ಯಾತನ ಪರೀಕ್ಷಾ ಮಾಡಾಕ ಏನೇನೋ ಪ್ರಶ್ನೆ ಕೇಳತಿದ್ರ. ಒಮ್ಮೆ ಹಿಂಗ ಸಾಲಿಗಿ ಹೋಗುವಾಗ 'ಮ' ಹೊಟ್ಟೆ ಸೀಳಿದ್ರ ಏನ ಅಕ್ಕೈತಿ ಅಂತ ಕೇಳಿದಾಗ ನಮಗೆಲ್ಲ ಪಹೆಲಿ ಗೊತ್ತ ಆಗಲಿಲ್ಲ. ಒಬ್ಬೊಬ್ರು ಒಂದೊಂದ ಉತ್ತರ ಹೇಳಾಕ ಶುರು ಆತು. ಒಬ್ಬಾಂವ 'ಮ' ಅಂತ ಜೋರಾಗಿ ಮಹಾಪ್ರಾಣದಂಗ ಉಚ್ಚರಿಸಿದರ, ಅದನ ಹೊಟ್ಟೆ ಸೀಳಾಕ ಬರೂದಿಲ್ಲ ಅಂತ ಹಿಂಗ ಏನೇನೂ ಉತ್ರ ಹೇಳಾಕ ಹತ್ತಿದಿವಿ. ಕಡಿಕ ನಾನು ಮತ್ತ ಇನ್ನೊಬ್ಬ ಗೆಳೆಯ ಕೂಡಿ ನಿಂತಲ್ಲೆ ಪಾಟಿ ಮ್ಯಾಲೆ 'ಮ' ಬರದಿವಿ. ನಂತ್ರ ಹೊಟ್ಟೆ ಸೀಳಿದಿವಿ. ಆವಾಗ ಅದು ಹೆಚ್ಚು ಕಮ್ಮಿ 'ಛ' ತರ ಕಂಡಾಗ 'ಛ' ಆಗತೈತಿ ಅಂತ ಉತ್ರ ಕೇಳಿ ಅವರು ಖುಷಿಯಾದ್ರು. ಅಂತಾ ಟಾಯಮದಾಗ ಅವ್ರು ಬ್ಯಾರೆ ಬ್ಯಾರೆ ಪದಗೊಳ ಅರ್ಥಾನು ಹೇಳತಿದ್ರ. ಕಟ್ಲೆ, ಖಲಾಸೆ, ದಸ್ತಕ್, ಚಕ್‌ಬಂದಿ ಅಂತಹ ಕೆಲವು ಪದಗೊಳು ಅರ್ಥಾನು ಹೇಳತಿದ್ರು.

ಕರ್ನಾಟಕದ ನಕಾಶದೊಳಗ ಬಾಗಲಕೋಟ ಜಿಲ್ಲಾದ್ದ ಒಂದ ವೈಶಿಷ್ಟಾನ ಬ್ಯಾರೆ. ಯಾವಾಗ ಹಿಂದ ಬಿಜಾಪುರ ಜಿಲ್ಲಾ ಇದ್ದಾಗ ಜಿಲ್ಲಾದ ಹಿರಿಹೊಳಿ ಅಂತ ಕರೆಸಿಕೊತಿದ್ದ ಕೃಷ್ಣ ನದಿಗೆ